ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಲೋಕ್ ಅರಾಧೆ

ಹರ್ಷವರ್ಧನ್ ರೆಡ್ಡಿ -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 30940/2019 (ಜಿಎಮ್-ಟಿಇಎನ್), ದಿನಾಂಕ 29 ನೇ ಆಗಸ್ಟ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಅಲೋಕ್ ಅರಾಧೆ:

ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಮಹಮದ್ ತಾಹಿರ್ ಎ. ಇವರ ಪರವಾಗಿ ಶ್ರೀ ಜಯಕುಮಾರ್ ಎಸ್. ಪಾಟೀಲ್, ಮಾನ್ಯ ಹಿರಿಯ ನ್ಯಾಯವಾದಿ.

1 ನೇ ಪ್ರತ್ಯರ್ಜಿದಾರರ ಪರ ಶ್ರೀ ವಿಜಯ್ ಕುಮಾರ್ ಎ. ಪಾಟೀಲ್, ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿ.

2 ರಿಂದ 5 ರವರೆಗಿನ ಪ್ರತ್ಯರ್ಜಿದಾರರ ಪರ ಶ್ರೀ ಎಸ್. ಎನ್. ಪ್ರಶಾಂತ್ ಚಂದ್ರ, ಮಾನ್ಯ ನ್ಯಾಯವಾದಿ.

6 ನೇ ಪ್ರತ್ಯರ್ಜಿದಾರರ ಪರ ಶ್ರೀ ಟಿ. ಶ್ರೀನಿವಾಸನ್, ಮಾನ್ಯ ನ್ಯಾಯವಾದಿ.

ರಿಟ್ ಅರ್ಜಿಯ ಸುನಾವಣೆಗೆ ಅನುಮತಿ ನೀಡಲಾಗಿದೆ.ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ ಅಂತಿಮವಾಗಿ ಸುನಾವಣೆ ಮಾಡಲಾಗಿದೆ.

2. ಭಾರತ ಸಂವಿಧಾನದ 226 ನೇ ಅನುಚ್ಛೇದದ ಮೇರೆಗಿನ ಈ ಅರ್ಜಿಯಲ್ಲಿ, ಇತರ ವಿಷಯಗಳ ಜೊತೆಗೆ ಅರ್ಜಿದಾರರು, ಪ್ರಸ್ತಾವನಾ ಮನವಿಯ (ಆರ್ಎಫ್ಪಿ) 3.4.2 ನೇ ಖಂಡಕ್ಕನುಸಾರವಾಗಿ, ಒಂದು ವಾರ್ಡ್ನಲ್ಲಿ ಒಬ್ಬರಿಗಿಂತ ಹೆಚ್ಚು ಬಿಲ್ಡರ್ಗಳು ಭಾಗವಹಿಸಿದ ಸಂದರ್ಭಗಳಲ್ಲಿ, ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಲು 2 ರಿಂದ 5 ರವರೆಗಿನ ಪ್ರತ್ಯರ್ಜಿದಾರರನ್ನು ನಿರ್ದೇಶಿಸಿ ಪರಮಾದೇಶದ (ಮ್ಯಾಂಡಮಸ್) ರಿಟ್ಟಾಗಿ ಕೋರಿದ್ದಾರೆ.ಅಲ್ಲದೆ ಅರ್ಜಿದಾರರು, ಪ್ರಸ್ತಾವನಾ ಮನವಿಯ ಷರತ್ತುಸಂಖ್ಯೆ: 3.4.1 (ಬಿ) ಕ್ರಮ ಸಂಖ್ಯೆ(ii) ಮತ್ತು 3.4.2.ಇವುಗಳ ಹಿನ್ನೆಲೆಯಲ್ಲಿ, 6 ನೇ ಪ್ರತ್ಯರ್ಜಿದಾರರನ್ನು ಹೊರತುಪಡಿಸಿ, ವಾರ್ಡ್ಸಂಖ್ಯೆ: 26 ರ ಸಂಬಂಧದಲ್ಲಿನ ಟೆಂಡರ್ಅನ್ನು ಅಂತಿಮಗೊಳಿಸಲು 2 ರಿಂದ 5 ರವರೆಗಿನ ಪ್ರತ್ಯರ್ಜಿದಾರರನ್ನು ನಿರ್ದೇಶಿಸಿ ಪರಮಾದೇಶದ ರಿಟ್ಟಾಗಿ ಸಹ ಕೋರಿದ್ದಾರೆ.ಇದಲ್ಲದೆ ಅರ್ಜಿದಾರರು, ಪ್ರಸ್ತಾವನಾ ಮನವಿಯ ಷರತ್ತುಸಂಖ್ಯೆ: 3.4.1 (ಬಿ) ಕ್ರಮ ಸಂಖ್ಯೆ(ii) ಮತ್ತು 3.4.2.ಇವುಗಳ ಅನುಪಾಲನೆಯಲ್ಲಿ ಬಿಲ್ಡರ್ಗಳ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸಲು 2 ರಿಂದ 5 ನೇ ಪ್ರತ್ಯರ್ಜಿದಾರರನ್ನು ನಿರ್ದೇಶಿಸಿ ಪರಮಾದೇಶದ ರಿಟ್ಅನ್ನು ಸಹ ಕೋರಿದ್ದಾರೆ.

3. ಅರ್ಜಿ ಸಲ್ಲಿಕೆಗೆ ಕಾರಣವಾಗಿರುವ ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಲಾಗಿದೆ 5 ನೇ ಪ್ರತ್ಯರ್ಜಿದಾರರು, ಬೆಂಗಳೂರು ನಗರದ 198 ವಾರ್ಡ್ಗಳಲ್ಲಿ ವಿಂಗಡಿತ ಹಸಿ ತ್ಯಾಜ್ಯ, ನೈರ್ಮಲ್ಯ ಸಂಬಂಧಿ ತ್ಯಾಜ್ಯ ಮತ್ತು ರಸ್ತೆ ಗುಡಿಸಿದಾಗ ದೊರೆಯುವ ತ್ಯಾಜ್ಯವನ್ನು ಮನೆಗಳಿಂದ ಸಂಗ್ರಹಿಸಿ ಸಾಗಣೆ ಮಾಡುವುದಕ್ಕಾಗಿ ಜನವರಿ, 2019 ರಲ್ಲಿ ಟೆಂಡರ್ಅನ್ನು ಕರೆದಿದ್ದರು.ಬಿಡ್ ಸಲ್ಲಿಕೆಗೆ 20.02.2019 ಕೊನೆಯ ದಿನಾಂಕವಾಗಿತ್ತು.ಬಿಡ್ ಸಲ್ಲಿಕೆಯ ಅಂತಿಮ ದಿನಾಂಕವನ್ನು ಕಾಲ ಕಾಲಕ್ಕೆ ವಿಸ್ತರಿಸಿ ಕೊನೆಗೆ 10.05.2019 ರಂದು ನಿಗದಿಪಡಿಸಲಾಗಿತ್ತು.ಅರ್ಜಿದಾರರು ವಾರ್ಡ್ಸಂಖ್ಯೆ: 26 ಕ್ಕೆ ತಮ್ಮ ಬಿಡ್ಅನ್ನು ಸಲ್ಲಿಸಿದ್ದರೆ, 6 ನೇ ಪ್ರತ್ಯರ್ಜಿದಾರರು ವಾರ್ಡ್ಸಂಖ್ಯೆ: 9 ಮತ್ತು 26 ಕ್ಕೆ ಅವರ ಬಿಡ್ಗಳನ್ನು ಸಲ್ಲಿಸಿದ್ದರು.ವಾರ್ಡ್ಸಂಖ್ಯೆ: 26 ರ ಸಂಬಂಧದಲ್ಲಿ, ಅರ್ಜಿದಾರರು ಮತ್ತು 6 ನೇ ಪ್ರತ್ಯರ್ಜಿದಾರರು ಇಬ್ಬರು ಮಾತ್ರವೇ ಟೆಂಡರುದಾರರಾಗಿದ್ದು, ಅವರ ಬಿಡ್ಗಳು ತಾಂತ್ರಿಕವಾಗಿ ಅರ್ಹವೆಂದು ಕಂಡುಬಂದಿದ್ದವು.ತರುವಾಯ, ಅರ್ಜಿದಾರರ ಮತ್ತು 6 ನೇ ಪ್ರತ್ಯರ್ಜಿದಾರರ ಹಣಕಾಸು ಬಿಡ್ಅನ್ನು 5 ನೇ ಪ್ರತ್ಯರ್ಜಿದಾರರು ತೆರೆದು, ವಾರ್ಡ್ಸಂಖ್ಯೆ: 26 ರ ಸಂಬಂಧವಾಗಿಯೂ ಸಹ 6 ನೇ ಪ್ರತ್ಯರ್ಜಿದಾರರು ಕನಿಷ್ಠ ಬಿಲ್ಡರ್ ಎಂದು ಘೋಷಿಸಿದರು.ವಾರ್ಡ್ಸಂಖ್ಯೆ: 26 ರ ಸಂಬಂಧದಲ್ಲಿನ ಬಿಡ್ಅನ್ನು ಟೆಂಡರ್ ಷರತ್ತುಗಳಿಗೆ ಅನುಸಾರವಾಗಿ ನಿಖರವಾಗಿ ಮೌಲ್ಯಮಾಪನ

ಮಾಡಿಲ್ಲವೆಂಬುದು ಅರ್ಜಿದಾರರ ಮೊಕದ್ದಮೆಯಾಗಿದೆ.ಆ ತರುವಾಯ, ಅರ್ಜಿದಾರರುದಿನಾಂಕ: 31.05.2019 ರಂದು ಹಾಗೂ 29.06.2019 ರಂದು ಮನವಿಗಳನ್ನು ಸಲ್ಲಿಸಿದ್ದಾರೆ.

ಆದಾಗ್ಯೂ, ಅರ್ಜಿದಾರರು ಸಲ್ಲಿಸಿದ ಮನವಿಗಳಿಗೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿರುವುದಿಲ್ಲ.ಮೇಲೆ ಹೇಳಿದ ಸಂಗತಿಯ ಹಿನ್ನೆಲೆಯಲ್ಲಿ, ಅರ್ಜಿದಾರರು ಈ ನ್ಯಾಯಾಲಯವನ್ನು ಸಂಪರ್ಕಿಸಿದ್ದಾರೆ.

4. ಪ್ರಸ್ತಾವನಾ ಮನವಿಯ ಕಡೆಗೆ ಮತ್ತು ನಿರ್ದಿಷ್ಟವಾಗಿ 3.4.1, 3.4.2, 3.4.3 ಮತ್ತು 3.7.5 ನೇ ಖಂಡಗಳ ಕಡೆಗೆ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಈ ನ್ಯಾಯಾಲಯದ ಗಮನವನ್ನು ಸೆಳೆಯುತ್ತಾ, ಒಬ್ಬ ಬಿಡರ್ರು ಒಂದಕ್ಕಿಂತ ಹೆಚ್ಚು ಪ್ಯಾಕೇಜ್ಗಳಿಗೆ ಬಿಡ್ಅನ್ನು ಸಲ್ಲಿಸಿದಲ್ಲಿ, ಎರಡನೇ ಪ್ಯಾಕೇಜ್ಗಾಗಿ ಚ ಅಂಥ ಆದ್ಯತಾ ಬಿಲ್ಡರ್ ಹಣಕಾಸು ಬಿಡ್ಅನ್ನು ತೆರೆಯುವ ಮೊದಲು, ಆದ್ಯತಾ ಬಿಲ್ಡರ್ಗಳ ಉಳಿಕೆ, ತಾಂತ್ರಿಕ ಮತ್ತು ಹಣಕಾಸು ಬಿಡ್ ಸಾಮರ್ಥ್ಯವನ್ನು ಅಂದಾಜಿಸಬೇಕಾಗುತ್ತದೆ ಎಂದು ವಾದಿಸಿದ್ದಾರೆ.ಬಿಡರ್ರ ಒಟ್ಟು ಹಣಕಾಸು ಸಾಮರ್ಥ್ಯದಿಂದ ನೀಡಲಾದ ಪ್ಯಾಕೇಜ್ಗೆ ಸಂಬಂಧಿಸಿದಂತೆ 3.4.1 ( ಎ) ಮತ್ತು 3.4.1 (ಬಿ) ಖಂಡಗಳಲ್ಲಿ ಉಲ್ಲೇಖಿಸಿದಂತೆ ಕನಿಷ್ಠ ತಾಂತ್ರಿಕ ಸಾಮರ್ಥ್ಯ ಮತ್ತು ಹಣಕಾಸು ಸಾಮರ್ಥ್ಯದಿಂದ ಉಳಿಕೆ, ತಾಂತ್ರಿಕ ಮತ್ತು ಹಣಕಾಸು ಬಿಡ್ ಸಾಮರ್ಥ್ಯವನ್ನು ಲೆಕ್ಕಹಾಕಬೇಕಾಗುತ್ತದೆ ಎಂದು ವಾದಿಸಿದ್ದಾರೆ.ಅಷ್ಟೇ ಅಲ್ಲದೆ ಅವರು, ಒಪ್ಪಿಕೊಂಡಿರುವಂತೆ, ಹಿಂದಿನ ಎರಡು ವರ್ಷಗಳ ಅವಧಿಗಾಗಿ 6 ನೇ ಪ್ರತ್ಯರ್ಜಿದಾರರ ಸರಾಸರಿ ವಾರ್ಷಿಕ ವಹಿವಾಟು 736.14 ಲಕ್ಷ ರೂ.ಗಳಾಗಿದೆಯೆಂದು ವಾದಿಸಿದ್ದಾರೆ.ವಾರ್ಡ್ಸಂಖ್ಯೆ: 9 ರ ಸಂಬಂಧದಲ್ಲಿ 6 ನೇ ಪ್ರತ್ಯರ್ಜಿದಾರರಿಗೆ ಗುತ್ತಿಗೆ ನೀಡಿಕೆಯಲ್ಲಿ ಅವರ ಉಳಿಕೆ, ಹಣಕಾಸು ಬಿಡ್ಡಿಂಗ್ ಸಾಮರ್ಥ್ಯ 148.72 ಲಕ್ಷ ರೂ.ಗಳಾಗಿದ್ದು, ವಾರ್ಡ್ಸಂಖ್ಯೆ: 26 ರ ಸಂಬಂಧದಲ್ಲಿ ಗುತ್ತಿಗೆ ಕಾಮಗಾರಿಯ ಘೋಷಿತ ಮೌಲ್ಯ 280.34 ಲಕ್ಷ ರೂ.ಗಳಾಗಿತ್ತಾದ್ದರಿಂದ, 6 ನೇ ಪ್ರತ್ಯರ್ಜಿದಾರರು ಕನಿಷ್ಠ 560.68 ಲಕ್ಷ ರೂ.ಗಳ ಹಣಕಾಸು ಸಾಮರ್ಥ್ಯವನ್ನು ಹೊಂದಿರಬೇಕಾಗಿತ್ತು ಎಂದು ಸಹ ವಾದಿಸಿದ್ದಾರೆ.ಇದಲ್ಲದೆ ಅವರು, ಒಪ್ಪಿಕೊಂಡಂತೆ 6 ನೇ ಪ್ರತ್ಯರ್ಜಿದಾರರು ಅಗತ್ಯ ಹಣಕಾಸು ಸಾಮರ್ಥ್ಯವನ್ನು ಹೊಂದಿರಲಿಲ್ಲ ಮತ್ತು 148.72 ಲಕ್ಷ ರೂ.ಗಳ ಹಣಕಾಸು ಸಾಮರ್ಥ್ಯವನ್ನು ಮಾತ್ರ ಹೊಂದಿದ್ದರಾದ್ದರಿಂದ, 6 ನೇ ಪ್ರತ್ಯರ್ಜಿದಾರರ ಬಿಡ್ ಅನುಮೋದನಾತ್ಮಕವಾಗಿರಲಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.

5. ಇನ್ನೊಂದೆಡೆ, 2 ರಿಂದ 5 ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಸದರಿ ಖಂಡಗಳಲ್ಲಿನ ಎಂದರೆ 3.4.1, 3.4.2, 3.4.3 ಮತ್ತು 3.7.5 ನೇ ಖಂಡಗಳಲ್ಲಿನ ಎಲ್ಲಾ ಷರತ್ತುಗಳನ್ನು ಒಟ್ಟಿಗೆ ಓದಬೇಕಾಗುತ್ತದೆಯೇ ಹೊರತು ಪ್ರತ್ಯೇಕವಾಗಿಯಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಅವರು, ಪ್ರಸ್ತಾವನಾ ಮನವಿ ದಸ್ತಾವೇಜಿನ 3.4.3 ನೇ ಖಂಡದಲ್ಲಿರುವ ಅಂಶದ ಹಿನ್ನೆಲೆಯಲ್ಲಿ ಬಿಡರ್ರ ಹಣಕಾಸು ಬಿಡ್ ಸಾಮರ್ಥ್ಯವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತಾದ್ದರಿಂದ, 6 ನೇ ಪ್ರತ್ಯರ್ಜಿದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದರು ಮತ್ತು ವಾರ್ಡ್ಸಂಖ್ಯೆ: 26 ರ ಸಂಬಂಧದಲ್ಲಿ ಕನಿಷ್ಠ ಬಿಡ್ಡರ್ ಎಂದು ಸರಿಯಾಗಿಯೇ ಘೋಷಿಸಲಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.ಇದಲ್ಲದೆ ಅವರು, 6 ನೇ ಪ್ರತ್ಯರ್ಜಿದಾರರ ಪರವಾಗಿ ಗುತ್ತಿಗೆ ನೀಡುವ ನಿರ್ಣಯವನ್ನು ಕೈಗೊಳ್ಳಲಾಗಿಲ್ಲವಾದ್ದರಿಂದ, ಈ ಹಂತದಲ್ಲಿ ಅರ್ಜಿದಾರರು ರಿಟ್ ಅರ್ಜಿಯನ್ನು ಅ ಸಲ್ಲಿಸಿರುವುದು ಆತುರದ ಕ್ರಮವಾಗಿದೆ ಎಂದು ನಿವೇದಿಸಿಕೊಂಡಿದ್ದಾರೆ.6 ನೇ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಪೌರಸಭಾ ನಿಗಮದ ಪರ ಮಾನ್ಯ ನ್ಯಾಯವಾದಿಗಳು ಮಾಡಿಕೊಂಡ ನಿವೇದನೆಗಳನ್ನೇ ತೆಗೆದುಕೊಂಡಿದ್ದಾರೆ.

6. ನಾನು ಪರಸ್ಪರರ ನಿವೇದನೆಗಳನ್ನು ಪರಿಗಣಿಸಿದ್ದೇನೆ ಮತ್ತು ದಾಖಲೆಯನ್ನು ಅವಲೋಕಿಸಿದ್ದೇನೆ.ಟೆಂಡರ್ ಆಹ್ವಾನಿಸುವ ನೋಟೀಸಿನ (ಎನ್ಐಟಿ) ಷರತ್ತುಗಳನ್ನು ಸುಸಂಗತವಾಗಿ ಓದಬೇಕೇ ಹೊರತು ಪ್ರತ್ಯೇಕವಾಗಿ ಓದಲಾಗುವುದಿಲ್ಲ ಎಂಬುದು ಚರ್ವಿತಚರ್ವಣ ನಿಯಮವಾಗಿದೆ.ಟೆಂಡರ್ ನೋಟೀಸಿನಲ್ಲಿನ ಅಗತ್ಯತೆಯನ್ನು ಅತ್ಯಾವಶ್ಯಕ ಷರತ್ತುಗಳನ್ನಾಗಿ ಎಂದರೆ, ಅರ್ಹತೆಯ ಅತ್ಯಾವಶ್ಯಕ ಷರತ್ತುಗಳನ್ನಾಗಿ ವಿಧಿಸಿರುವ ಹಾಗೂ ಸಹಾಯಕ ಮತ್ತು ಪೂರಕವಾಗಿರುವ ಇತರ ಷರತ್ತುಗಳನ್ನಾಗಿ ವರ್ಗೀಕರಿಸಲಾಗುವುದಿಲ್ಲ ಎಂಬುದು ಸುಸ್ಥಾಪಿತ ಕಾನೂನು ಸ್ಥಿತಿಯಾಗಿದೆ.ಅರ್ಹತೆಯ ಅತ್ಯಾವಶ್ಯಕ ಷರತ್ತುಗಳ ಸಂದರ್ಭದಲ್ಲಿ, ಟೆಂಡರ್ ಹೊರಡಿಸುವ ಪ್ರಾಧಿಕಾರವು ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಅಗತ್ಯವಿರಬಹುದಾಗಿರುತ್ತದೆ.ಆದರೆ ಸಹಾಯಕ ಷರತ್ತಿನ ಸಂದರ್ಭದಲ್ಲಿ, ಸೂಕ್ತ ಸಂದರ್ಭಗಳಲ್ಲಿ ಷರತ್ತುಗಳ ಕಟ್ಟುನಿಟ್ಟಿನ ಅಕ್ಷರಶಃ ಅನುಪಾಲನೆಗೆ ಒತ್ತಾಯಿಸಲು ಅಥವಾ ಒತ್ತಾಯಿಸದೆ ಇರಲು ಪ್ರಾಧಿಕಾರವು ಮುಕ್ತವಾಗಿರುತ್ತದೆ.ಕಾರನಿರ್ವಾಹಕ ಪ್ರಾಧಿಕಾರವು

ಅದರ ಕ್ರಮಗಳನ್ನು ನಿರ್ಧರಿಸಬೇಕೆಂದು ಹೇಳುವ ಮಾನದಂಡಗಳಿಗೆ ಅದು ಕಟ್ಟುನಿಟ್ಟಾಗಿ ಬದ್ಧವಾಗಿರಬೇಕೆಂದು ಆಡಳಿತಾತ್ಮಕ ಕಾನೂನಿನ ಸುಸ್ಥಾಪಿತ ನಿಯಮವಾಗಿದ್ದು, ಅವುಗಳ ಉಲ್ಲಂಘನೆಯಲ್ಲಿನ ಕ್ರಮದ ಅಸಿಂಧುಗೊಳಿಸುವಿಕೆಯ ನೋವಿನ ಕುರಿತ ಆ ಮಾನದಂಡಗಳನ್ನು ಅದು ಅತ್ಯಂತ ಜಾಗರೂಕತೆಯಿಂದ ಪಾಲಿಸಬೇಕಾಗುತ್ತದೆ. 'ವೀಟರಲ್ಲಿ -ವಿರುದ್ಧ ಸೇಟನ್ - 359 ಯುಎಸ್ 535, ಮೊಕದ್ದಮೆಯಲ್ಲಿ ನ್ಯಾಯಮೂರ್ತಿ ಶ್ರೀ ಫ್ರಾಂಕ್ಫರ್ಟ್ ಅವರು ನಿರೂಪಿಸಿರುವ ಮೇಲೆ ಹೇಳಿದ ನಿಯಮವನ್ನು, ಪ್ರಸಿದ್ಧ ಮೊಕದ್ದಮೆಯಾದ ' ರಮಣ ದಯಾರಾಮ್ ಶೆಟ್ಟಿ -ವಿರುದ್ಧ-ಭಾರತ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ - ಎಐಆರ್ 1979 ಎಸ್ಸಿ 1628, ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಅನುಮೋದಿಸಿದೆ.ಆ ನಂತರ, ಮೇಲೆ ಹೇಳಿದ ನಿಯಮವನ್ನು ಎ.ಎಸ್. ಅಹ್ಲುವಾಲಿಯಾ -ವಿರುದ್ಧ-ಪಂಜಾಬ್ ರಾಜ್ಯ - (1975) 3 ಎಸ್ಸಿಸಿ 503, ಮತ್ತು ' ಸುಖದೇವ್ ಸಿಂಗ್ -ವಿರುದ್ಧ-ಭಗತ್ರಾಮ್ ಸರ್ದಾರ್ ಸಿಂಗ್ ರಘುವಂಶಿ - (1975) 1 ಎಸ್ಸಿ 421, ಮೊಕದ್ದಮೆಗಳಲ್ಲಿ ತರುವಾಯ ಅನುಮೋದಿಸಲಾಯಿತು.ಇದಲ್ಲದೆ, ಮೇಲೆ ಹೇಳಿದ ಆಡಳಿತಾತ್ಮಕ ಕಾನೂನಿನ ನಿಯಮವು 14 ನೇ ಅನುಚ್ಛೇದದಿಂದ ಉದ್ಭವವಾಗಿದ್ದು, ಅದು 14 ನೇ ಅನುಚ್ಛೇದವನ್ನು ಮಾತ್ರ ಆಧರಿಸಿರದೆ ಸ್ವತಂತ್ರ ಅಸ್ತಿತ್ವವನ್ನು ಸಹ ಹೊಂದಿದೆ ಎಂದು ನಿರ್ಣಯಿಸಲಾಯಿತು.ಟೆಂಡರುದಾರರ ಅರ್ಹತೆಗೆ ಸಂಬಂಧಿಸಿದ ಷರತ್ತುಗಳು ಕಡ್ಡಾಯವಾಗಿರಬೇಕು ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅದರಿಂದ ವಿಪಥಗೊಳ್ಳಲು ಅನುಮತಿಸಲಾಗುವುದಿಲ್ಲ.' ಜಿ.ಜೆ. ಫರ್ನಾಂಡಿಜ್ –ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು - (1990) 2 ಎಸ್ಸಿಸಿ 488, ಮತ್ತು ' ಸೋದ್ವಾರ್ ಸ್ಟೀಲ್ ಕಾರ್ಪೊರೇಷನ್ -ವಿರುದ್ಧ-ಗಣೇಶ್ ಇಂಜಿನಿಯರಿಂಗ್ - (1991) 3 ಎಸ್ಸಿಸಿ 273, ಮೊಕದ್ದಮೆಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಅಭಿಪ್ರಾಯವನ್ನು ತೆಗೆದುಕೊಂಡಿತು.ಇದಲ್ಲದೆ, ಟೆಂಡರ್ನ ನಿರಾಕರಣೆಯಲ್ಲಿ ಪರಿಣಮಿಸುವ ಅಗತ್ಯ ಷರತ್ತುಗಳನ್ನು ಈಡೇರಿಸದೆ ಇದ್ದರೆ, ಆಗ ಅದು ಟೆಂಡರ್ನ ಅತ್ಯಾವಶ್ಯಕ ಭಾಗವಾಗುವುದು ಎಂದು ನಿರ್ಣಯಿಸಲಾಯಿತು.[ನೋಡಿ:6 ' ಕನ್ನಯ್ಯಾ ಲಾಲ್ ಅಗರ್ವಾಲ್ ವಿರುದ್ಧ ಭಾರತ ಒಕ್ಕೂಟ ಮತ್ತು ಇತರರು - 2002 (6) ಎಸ್ಸಿಸಿ 315 ', ಮತ್ತು ' ಐಆರ್ಸಿಟಿಸಿ -ವಿರುದ್ಧ-ದೋಶಿಯಾನ್ ವಯೋಲಿಯಾ ವಾಟರ್ ಸಲ್ಯೂಷನ್ಸ್ – 2010 (13) ಎಸ್ಸಿಸಿ 364.

7. ಮೇಲೆ ಹೇಳಿದ ಸುಸ್ಥಾಪಿತ ಕಾನೂನು ಸ್ಥಾನಮಾನದ ಹಿನ್ನೆಲೆಯಲ್ಲಿ, ಮುಂದಿನ ಕ್ರಮ ತೆಗೆದುಕೊಳ್ಳುವ ಮೊದಲು, ಈ ಕೆಳಗೆ ಓದಲಾದ 3.4.1, 3.4.2, 3.4.3 ಮತ್ತು 3.7.5 ನೇ ಖಂಡಗಳ ಸುಸಂಗತ ಉದ್ಧತ ಭಾಗಗಳನ್ನು ಉಲ್ಲೇಖಿಸುವುದು ಯುಕ್ತವಾಗಿದೆ:

3.4.1 ಬಿಲ್ಡರ್ನು ಟೆಂಡರ್ ಪ್ರಕ್ರಿಯೆಯಲ್ಲಿ ಅರ್ಹನಾಗಲು ಈ ಮುಂದಿನ ಅರ್ಹತಾ ಷರತ್ತುಗಳನ್ನು ಈಡೇರಿಸತಕ್ಕದ್ದು:

(ಎ) ತಾಂತ್ರಿಕ ಸಾಮರ್ಥ್ಯ:ತಾಂತ್ರಿಕ ಸಾಮರ್ಥ್ಯ ಮತ್ತು ಅನುಭವವನ್ನು ಸಾಧಿಸಲು ( " ತಾಂತ್ರಿಕ ಸಾಮರ್ಥ್ಯ "), ಬಿಡರ್ನು ಈ ಮುಂದಿನ ಅಂಶಗಳ ವ್ಯವಸ್ಥೆಯನ್ನಾಧರಿಸಿದ ಈ ಮುಂದಿನ ಮಾನದಂಡಗಳನ್ನು ಈಡೇರಿಸತಕ್ಕದ್ದು.ಪ್ರಸ್ತಾವನೆಯು ಇದರಲ್ಲಿ ಹೇಳಿದ ಒಂದು ಅಥವಾ ಹೆಚ್ಚು ಅರ್ಹತಾ ಮಾನದಂಡವನ್ನು ಚ ಈಡೇರಿಸದಿದ್ದರೆ, ಬಿಡ್ ಅನುಮೋದನಾತ್ಮಕವಾದುದಲ್ಲವೆಂದು ಪರಿಗಣಿಸಿ, ಆ ಬಿಡ್ಗೆ ಸಂಬಂಧಿಸಿದ ಮುಂದಿನ ಮೌಲ್ಯಮಾಪನವನ್ನು ಕೈಗೊಳ್ಳಲಾಗುವುದಿಲ್ಲ.

| **ಕ್ರ . ಸಂ .** | **ಮೌಲ್ಯಮಾಪನಾ ಮಾನದಂಡ** | **ಅಂಶಗಳು** | **ಉಪ ಅಂಶಗಳು** |
|---|---|---|---|
| 1 | ವಹಿಸಲಾದ ಕಾಮಗಾರಿಗೆ ಸಂಬಂಧಿಸಿದಂತೆ ಬಿಲ್ಡರ್‌ನ ನಿರ್ದಿಷ್ಟ ಅನುಭವ | 5 | |
| 1.1 | ಪುರಸಭಾ ಘನ ತ್ಯಾಜ್ಯದ ಮನೆ ಮನೆ ಸಂಗ್ರಹಣೆ ( ಪ್ರಾಥಮಿಕ ಸಂಗ್ರಹಣೆ ) ಯಲ್ಲಿ ಹಾಗೂ ಹಿಂದಿನ ಮೂರು ಪೂರ್ಣ ಹಣಕಾಸು ವರ್ಷಗಳ ಎಂದರೆ 2015-16 , 2016-17 ಮತ್ತು 2017-18ನೇ ವರ್ಷಗಳ ಯಾವುದೇ 12 ತಿಂಗಳುಗಳಲ್ಲಿ ವಾರ್ಡ್‌ಗೆ | | 3 |

| | | | |
|---|---|---|---|
| | ನಿರ್ದಿಷ್ಟಪಡಿಸಿದ ಕನಿಷ್ಠ ಶೇಕಡ 80 ರಷ್ಟು ಮನೆಗಳಿಂದ ಸಂಗ್ರಹಿಸಿದ ಘನ ತ್ಯಾಜ್ಯವನ್ನು ಗೊತ್ತುಪಡಿಸಿದ ಸ್ಥಳಗಳಿಗೆ ಸಾಗಣೆ ಮಾಡಿದ ಅನುಭವವನ್ನು ಬಿಡರ್ ನು ಹೊಂದಿರಬೇಕು | | |
| 1.2 | ಹಿಂದಿನ ಮೂರು ಪೂರ್ಣ ಹಣಕಾಸು ವರ್ಷಗಳ ಎಂದರೆ 2015-16 , 2016-17 ಮತ್ತು 2017-18ನೇ ವರ್ಷಗಳ ಯಾವುದೇ 12 ತಿಂಗಳುಗಳಲ್ಲಿ ವಾರ್ಡ್‌ಗಳಲ್ಲಿ ಸೃಜನೆಯಾದ ಹಸಿ ಕಸಕ್ಕೆ ಸಂಬಂಧಿಸಿದಂತೆ ವಾರ್ಡ್‌ಗೆ ನಿರ್ದಿಷ್ಟಪಡಿಸಿದ ಮೂಲಸೌಕಯ್ಯದ ಕನಿಷ್ಠ ಪಕ್ಷ ಶೇಕಡ 80 ರಷ್ಟನ್ನು ಅನುಷ್ಠಾನ ಗೊಳಿಸುವ ಮೂಲಕ ನಿರ್ದಿಷ್ಟಪಡಿಸಿದ ಸ್ಥಳಗಳಿಗೆ ಪುರಸಭೆಯ ಘನ ತ್ಯಾಜ್ಯದ ದ್ವಿತೀಯ ಸಾಗಣೆಯಲ್ಲಿ ಬಿಡರ್‌ನು ಅನುಭವ ಹೊಂದಿರಬೇಕು . | | 2 |

| **ಕ್ರ . ಸಂ .** | **ಮೌಲ್ಯಮಾಪನಾ ಮಾನದಂಡ** | **ಅಂಶಗಳು** | **ಉಪ ಅಂಶಗಳು** |
|---|---|---|---|
| 2 | ಕೆಲಸದ ವ್ಯಾಪ್ತಿಗೆ ಪ್ರತಿಕ್ರಿಯೆಯಾಗಿ ಪ್ರಸ್ತಾವಿತ ಕಾಮಗಾರಿಯ ಸಮರ್ಪಕತೆ ಮತ್ತು ಕ್ರಮವಿಧಾನ O | 20 | |
| 2.1 | ಬೇರ್ಪಡಿಸಿದ ತ್ಯಾಜ್ಯ , ನೈರ್ಮಲ್ಯ ತ್ಯಾಜ್ಯದ ಮನೆ ಮನೆ ಸಂಗ್ರಹಣೆ ಮತ್ತು ಬೀದಿ ಕಸದ ತ್ಯಾಜ್ಯದ ಸಂಗ್ರಹಣೆ ಹಾಗೂ ಅದನ್ನು ಗೊತ್ತುಪಡಿಸಿದ ಸ್ಥಳಗಳಿಗೆ ಪ್ರತ್ಯೇಕವಾಗಿ ಸಾಗಣೆ ಮಾಡುವುದರ ಕುರಿತಂತೆ ಸವಿವರವಾದ ಪ್ರಸ್ತಾವಿತ ಕಾವ್ಯ ಯೋಜನೆ ಮತ್ತು ಕ್ರಮ ವಿಧಾನ | | 10 |
| 2.2 | ಮನೆ ಮನೆ ಸಂಗ್ರಹಣೆ ಅಡಿಯಲ್ಲಿ ಒಳಗೊಂಡ ಮನೆಗಳ ಸಂಖ್ಯೆಯನ್ನು ಸೂಚಿಸಿ ನಡೆಸಿದ ಕಾರ್ಯನಿರ್ವಹಣೆಗಾಗಿ ತೃಪ್ತಿಕರ ಕಾರಸಾಧನಾ ಪ್ರಮಾಣಪತ್ರ | | 10 |
| 3 | ವಹಿಸಿದ ಕೆಲಸಕ್ಕೆ ಸಂಬಂಧಿಸಿದಂತೆ ಹೊಂದಿರುವ ಮುಖ್ಯ ವೃತ್ತಿಪರ ಸಿಬ್ಬಂದಿಯ ಶೈಕ್ಷಣಿಕ ಅರ್ಹತೆಗಳು ಮತ್ತು ಸಕ್ಷಮತೆ | 65 | |
| 3.1 | ಇಎಸ್‌ಐ , ಇಪಿಎಫ್ ಸಂಖ್ಯೆ ಸಹಿತ ಸಹಾಯಕರ ಸ್ವ - ವಿವರ ಮತ್ತು ಪ್ರತಿಯೊಂದು ಸ್ಥಾನದ ಡಿಎಲ್ , ಇಎಸ್‌ಐ , ಇಪಿಎಫ್ ಸಹಿತ ಚಾಲಕರ ಸ್ವ - ವಿವರಗಳ ಸಲ್ಲಿಕೆ | | 15 |

| ಕ್ರ . ಸಂ . | ಮೌಲ್ಯಮಾಪನಾ ಮಾನದಂಡ | ಅಂಶಗಳು | ಉಪ ಅಂಶಗಳು |
|---|---|---|---|
| 3.2 | ಆಟೋ ಟಿಪ್ಪರ್ ವಾಹನದ ಆರ್‌ಸಿ / ಸ್ಮಾರ್ಟ್ ಕಾರ್ಡ್ ವಿವರಗಳು = ಆಟೋ ಟಿಪ್ಪರ್‌ನ ಮಾದರಿಯು 2015 ನೇ ವರ್ಷಕ್ಕಿಂತ ನಂತರದ್ದಾಗಿರಬೇಕೇ ಹೊರತು ಅದಕ್ಕಿಂತ ಮೊದಲಿನದ್ದಾಗಿರ ಬಾರದು . | | 25 |
| 3.3 | ದೊಡ್ಡ ಕಾಂಪ್ಯಾಕ್ಟರ್ ವಾಹನದ ಆರ್‌ಸಿ / ಸ್ಮಾರ್ಟ್ ಕಾರ್ಡ್ ವಿವರಗಳು ಮತ್ತು ಇದರ ಮಾದರಿಯು 2015 ನೇ ವರ್ಷದ ನಂತರದ್ದಾಗಿರಬೇಕೇ ಹೊರತು ಅದಕ್ಕಿಂತ ಮೊದಲಿನದಾಗಿರಬಾರದು . | | 25 |
| 4 | ಅರಿವು ಮೂಡಿಸುವ ಕಾರ್ಯಕ್ರಮವಾಗಿದ್ದರೆ ( ತರಬೇತಿ ) , ಅದರ ವಹಿಸುವಿಕೆಯ ಸೂಕ್ತತೆ | 10 | |
| 4.1 | ಘನ ತ್ಯಾಜ್ಯ ನಿರ್ವಹಣಾ ನಿಯಮಗಳು , 2016 ನ್ನು ಕುರಿತು ತರಬೇತಿ ವೇಳಾಸೂಚಿಗಳು ಮತ್ತು ಹಸಿ ಮತ್ತು ಒಣ ತ್ಯಾಜ್ಯವನ್ನು ಬೇರ್ಪಡಿಸುವುದು ಹಾಗೂ ಕಸಮುಕ್ತ ಮತ್ತು ಸೋರಿಕೆ ಮುಕ್ತ ನೆಲ ಎಂಬ ತತ್ವದ ಮೂಲಕ ತ್ಯಾಜ್ಯ ಸಂಗ್ರಹಣೆ , ವರ್ಗಾವಣೆ ಮತ್ತು ಸಾಗಣೆ ವಿಧಾನ . | | 10 |
| | 100 | 100 | ಒಟ್ಟು |

(ಬಿ) ಹಣಕಾಸು ಸಾಮರ್ಥ್ಯ:ಹಣಕಾಸು ಸಾಮರ್ಥ್ಯವನ್ನು ತೋರಿಸಲು, ಬಿಡರ್ನು ಈ ಮುಂದಿನ ಅಂಶಗಳನ್ನು ಆಧರಿಸಿದ ಈ ಮುಂದಿನ ಮಾನದಂಡಗಳನ್ನು ಈಡೇರಿಸತಕ್ಕದ್ದು.ಇದರಲ್ಲಿ ಹೇಳಲಾದ ಒಂದು ಅಥವಾ ಹೆಚ್ಚು ಅರ್ಹತಾ ಮಾನದ ಂ ಡಗಳನ್ನು ಪ್ರಸ್ತಾವನೆಯು ಈಡೇರಿಸದಿದ್ದರೆ, ಅದನ್ನು ಅನುಮೋದನಾತ್ಮಕವಲ್ಲದ ಬಿಡ್ ಎಂದು ಪರಿಗಣಿಸಿ, ಬಿಡ್ಗೆ ಸಂಬಂಧಿಸಿದ ಮುಂದಿನ ಮೌಲ್ಯಮಾಪನವನ್ನು ನಡೆಸಲಾಗುವುದಿಲ್ಲ:

| ಕ್ರ.ಸಂ. | ಮಾನದಂಡ | ಅವಧಿ | ಘಟಕ | ಕನಿಷ್ಠ |
|---|---|---|---|---|
| 2 | ಹಣಕಾಸು ಸಾಮರ್ಥ್ಯ | I | ನಿವ್ವಳ ಮೌಲ್ಯ | ಹಿಂದಿನ ಹಣಕಾಸು ವರ್ಷದ ನಿಕಟೋತ್ತರ |
| ( ಸಂಯೋಜಿತ ಸಂಸ್ಥೆಯ ಸಂದರ್ಭದಲ್ಲಿ , ಇಬ್ಬರೂ ಬಿಲ್ಡರ್‌ಗಳಿಗೆ ಹಿಂದಿನ ಹಣಕಾಸು ವರ್ಷದ ನಿಕಟೋತ್ತರ ) | ಸಕಾರಾತ್ಮಕ | | ಮತ್ತು | |
| | | i : = | ಸರಾಸರಿ ವಾರ್ಷಿಕ ವಹಿವಾಟು | ಬಿಡ್ ನಿಗದಿತ ದಿನಾಂಕದ ಹಿಂದಿನ ಕಳೆದ ಎರಡು ವರ್ಷಗಳು |

| ಕ್ರ.ಸಂ. | ಮಾನದಂಡ | ಅವಧಿ | ಘಟಕ | ಕನಿಷ್ಠ |
|---|---|---|---|---|
| | ಮತ್ತು | | | |
| i\| | ರಾಷ್ಟ್ರೀಕೃತ / ಅಧಿಸೂಚಿತ ಬ್ಯಾಂಕ್ ನೀಡಿದ ಧನಾನುಕೂಲತೆ ಪ್ರಮಾಣಪತ್ರ | ಬಿಡ್ ನಿಗದಿಯಾದ ದಿನಾಂಕಕ್ಕೆ ಹಿಂದಿನ ಇತ್ತೀಚಿನ ಪೂರ್ಣಗೊಂಡ ಹಣಕಾಸು ವರ್ಷ | ಆರ್‌ಎಫ್‌ಪಿ ಅಧಿಸೂಚನೆ ಪ್ರಕಾರ ಟೆಂಡರ್‌ಗೆ ಹೂಡಿದ ಮೊತ್ತದ ಶೇಕಡ 30 ರಷ್ಟಕ್ಕಿಂತ ಕಡಿಮೆ ಇರತಕ್ಕದ್ದಲ್ಲ | ಒಂದಕ್ಕಿಂತ ಹೆಚ್ಚು ಚ ವಾರ್ಡ್‌ಗಳಿಗೆ ಬಿಡ್ ಮಾಡಲು ಉದ್ದೇಶಿಸಿದ ಬಿಲ್ಡರ್‌ಗಳು ವಾರ್ಡ್ ಸಂಖ್ಯೆ ಮತ್ತು ಹೆಸರನ್ನು ಉಲ್ಲೇಖಿಸಿ ಪ್ರತ್ಯೇಕ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡತಕ್ಕದ್ದು |

ಪರಿಶಿಷ್ಟ-VIII, ಅನುಬಂಧ- I:ಹಣಕಾಸು ಬಿಡ್-ಬ್ರೇಕ್ ಅಪ್ನಲ್ಲಿ ಉಲ್ಲೇಖಿಸಿದ ಒಟ್ಟು ವಾಹನಗಳ ಸಂಖ್ಯೆಯ ಕನಿಷ್ಠ 50 ರಷ್ಟು ವಾಹನಗಳ ನೋಂದಣಿ ಪ್ರಮಾಣಪತ್ರ, ವಿಮೆ ಮತ್ತು ಹೊಗೆ ಹೊರಸೂಸುವಿಕೆ ಪರೀಕ್ಷಾ ಪ್ರಮಾಣಪತ್ರದ ನಮೂನೆಯಲ್ಲಿ ಬಿಡ್ದಾರ್ನೊಂದಿಗೆ ವಾಹನಗಳ ಮಾಲೀಕತ್ವವನ್ನು ಸಾಬೀತುಪಡಿಸುವ ದಸ್ತಾವೇಜೀಯ ಪುರಾವೆಯನ್ನು ಬಿಡರ್ನು ಸಲ್ಲಿಸತಕ್ಕದ್ದು :.

ಪರಿಶಿಷ್ಟ-VIII, ಅನುಬಂಧ- I:ಹಣಕಾಸು ಬಿಡ್-ಬ್ರೇಕ್ ಅಪ್ನಲ್ಲಿ ಉಲ್ಲೇಖಿಸಿದ ಅಂಥ ವಾಹನಗಳ ಸಂಬಂಧದಲ್ಲಿ ವಾಹನಗಳ ಮಾಲೀಕತ್ವವನ್ನು ಸಾಬೀತುಪಡಿಸುವ ದಸ್ತಾವೇಜೀಯ ಪುರಾವೆಯೊ ಂ ದಿಗೆ, ಉಳಿದ ವಾಹನಗಳು ಕರಾರು/ಬಾಡಿಗೆ ವಾಹನಗಳಾಗಿರುವ ಸಂದರ್ಭದಲ್ಲಿ, ವಹಿಸಿದ ಕೆಲಸಕ್ಕೆ ಸಂಬಂಧಿಸಿದ ವಾಹನಗಳ ಲಭ್ಯತೆಯನ್ನು ಸಾಬೀತುಪಡಿಸುವ ಒಪ್ಪಂದದ ಪ್ರತಿಯನ್ನು ಸಲ್ಲಿಸತಕ್ಕದ್ದು.

ಬಿಡ್ದಾರ್ನು:

(1) ಪರಿಶಿಷ್ಟ-VIII, ಅನುಬಂಧ- I:ಹಣಕಾಸು ಬಿಡ್-ಬ್ರೇಕ್ ಅಪ್ನಲ್ಲಿ ಉಲ್ಲೇಖಿಸಿದ ಒಟ್ಟು ವಾಹನಗಳ ಸಂಖ್ಯೆಯ ಕನಿಷ್ಠ 50 ರಷ್ಟು ವಾಹನಗಳ ನೋಂದಣಿ ಪ್ರಮಾಣಪತ್ರ, ವಿಮೆ ಮತ್ತು ಹೊಗೆ ಹೊರಸೂಸುವಿಕೆ ಪರೀಕ್ಷಾ ಪ್ರಮಾಣಪತ್ರದ ನಮೂನೆಯಲ್ಲಿ ಬಿಡ್ದಾರ್ನೊಂದಿಗೆ ವಾಹನಗಳ ಮಾಲೀಕತ್ವವನ್ನು ಸಾಬೀತುಪಡಿಸುವ ದಸ್ತಾವೇಜೀಯ ಪುರಾವೆಯನ್ನು ಸೇವಾ ಒಪ್ಪಂದದಲ್ಲಿ ನಿರೂಪಿಸಲಾದ ಸಂಪನ್ಮೂಲ ಕ್ರೋಢೀಕರಣ ಅವಧಿಯೊಳಗೆ ಸಲ್ಲಿಸಲಾಗುವುದು;

(ii) ಕರಾರು/ಬಾಡಿಗೆ ವಾಹನಗಳ ಸ ಂ ದರ್ಭದಲ್ಲಿ, ಪರಿಶಿಷ್ಟ-VIII, ಅನುಬಂಧ- I:ಹಣಕಾಸು ಬಿಡ್-ಬ್ರೇಕ್ ಅಪ್ನಲ್ಲಿ ಉಲ್ಲೇಖಿಸಿದ ಒಟ್ಟು ಎ ವಾಹನಗಳ ಸಂಖ್ಯೆಗೆ ಸಂಬಂಧಿಸಿದಂತೆ ವಾಹನಗಳ ನೋಂದಣಿ ಪ್ರಮಾಣಪತ್ರ, ವಿಮೆ ಮತ್ತು ಹೊಗೆ ಹೊರಸೂಸುವಿಕೆ ಪರೀಕ್ಷಾ ಪ್ರಮಾಣಪತ್ರದ ನಮೂನೆಯಲ್ಲಿ ವಾಹನಗಳ ಮಾಲೀಕತ್ವವನ್ನು ಸಾಬೀತುಪಡಿಸುವ ದಸ್ತಾವೇಜೀಯ ಪುರಾವೆಯೊಂದಿಗೆ, ವಹಿಸಿದ ಕೆಲಸಕ್ಕೆ ಸಂಬಂಧಿಸಿದಂತೆ ವಾಹನಗಳ ಲಭ್ಯತೆಯನ್ನು ಸಾಬೀತುಪಡಿಸುವ ಒಪ್ಪಂದದ ಪ್ರತಿ:ಸೇವಾ ಒಪ್ಪಂದದಲ್ಲಿ ನಿರೂಪಿಸಿದ ಸಂಪನ್ಮೂಲ ಕ್ರೋಢೀಕರಣ ಅವಧಿಯೊಳಗೆ ಸಲ್ಲಿಸಲಾಗುವುದು;

(iii) ಇಎಸ್ಐ, ಇಪಿಎಫ್ ಸಂಖ್ಯೆ ಸಹಿತ ಸಹಾಯಕರ ಸ್ವವಿವರವನ್ನು ಹಾಗೂ ಪ್ರತಿಯೊಂದು ಹುದ್ದೆಗೆ ಸಂಬಂಧಿಸಿದ ಡಿಎಲ್, ಇಎಸ್ಐ 9, ಇಪಿಎಫ್ ಸಹಿತ ಚಾಲಕರ ಸ್ವವಿವರವನ್ನು ಸಾಬೀತುಪಡಿಸುವ ದಸ್ತಾವೇಜೀಯ ಪುರಾವೆಯನ್ನು ಸೇವಾ ಒಪ್ಪಂದದಲ್ಲಿ ನಿರೂಪಿಸಲಾದಂತೆ ಸಂಪನ್ಮೂಲ ಕ್ರೋಢೀಕರಣ ಅವಧಿಯೊಳಗೆ ಸಲ್ಲಿಸಲಾಗುವುದು

- ಎಂದು ಹೇಳುವ ಅಫಿಡಾವಿಟ್‌ಅನ್ನು ಸಲ್ಲಿಸತಕ್ಕದ್ದು:

ಬಿಲ್ಡರ್ನು ತನ್ನ ಹಣಕಾಸು ಸಾಮರ್ಥ್ಯವನ್ನು ಸಾಬೀತುಪಡಿಸಲು ಮೇಲೆ ಉಪಬಂಧಿಸಿದ ಎಲ್ಲಾ ಹಣಕಾಸು ಮಾನದಂಡಗಳನ್ನು ಈಡೇರಿಸತಕ್ಕದ್ದು.

ಸಹಯೋಗಿ ಸಂಸ್ಥೆಯ ಸಂದರ್ಭದಲ್ಲಿ, ಪ್ರಮುಖ ಬಿಡರ್ನ ಹಾಗೂ ಸಹಯೋಗಿ ಸಂಸ್ಥೆಯ ಇತರ ಬಿಲ್ಡರ್ಗಳ ಸಂಯೋಜಿತ ತಾಂತ್ರಿಕ ಸಾಮರ್ಥ್ಯ ಮತ್ತು ಹಣಕಾಸು ಸಾಮರ್ಥ್ಯವನ್ನು ಪರಿಗಣಿಸತಕ್ಕದ್ದು.

(ಸಿ) ಟೆಂಡರ್ ಅಂಗೀಕರಿಸಲು ಅಗತ್ಯವಿರುವ ಕನಿಷ್ಠ ತಾಂತ್ರಿಕ ಅಂಕಗಳೆಂದರೆ, 75 ಅಂಶಗಳು.

ಮೌಲ್ಯಮಾಪನ ನಡೆಸುವಾಗ ದಸ್ತಾವೇಜುಗಳನ್ನು ಒಳಗೊಂಡು ಸ್ಪಷ್ಟೀಕರಣ ಮತ್ತು/ಅಥವಾ ಹೆಚ್ಚುವರಿ ಮಾಹಿತಿಯನ್ನು ಕೋರುವ ಹಕ್ಕು ಪ್ರಾಧಿಕಾರಕ್ಕಿರುತ್ತದೆ; ಪರಂತು, ಅವು ಬಿಡ್ ಸಲ್ಲಿಸುವ ಮೊದಲು ಅಸ್ತಿತ್ವದಲ್ಲಿರಬೇಕು, ಎಂದರೆ ಹಿಂದಿನಿಂದ ಅಸ್ತಿತ್ವದಲ್ಲಿದ್ದ ಸ್ವರೂಪದ್ದಾಗಿರಬೇಕು.

3.4.2 ಬಹು-ವಾರ್ಡ್ಗಳ ಸಂಬಂಧದಲ್ಲಿ ಅಡ್ಡರ್ನ ತಾಂತ್ರಿಕ ಸಾಮರ್ಥ್ಯ ಮತ್ತು ಹಣಕಾಸು ಸಾಮರ್ಥ್ಯವನ್ನು ಸಾಬೀತುಪಡಿಸುವುದು.

ಬಿಲ್ಡರ್ನು 1 (ಒಂದಕ್ಕಿಂತ ಹೆಚ್ಚು ಪ್ಯಾಕೇಜ್ಗಳಿಗಾಗಿ ಬಿಡ್ ಮಾಡಲು ಉದ್ದೇಶಿಸಿದ ಸಂದರ್ಭದಲ್ಲಿ, ಆತನು ಬಿಡ್ ಮಾಡಲು ಉದ್ದೇಶಿಸಿದ ಎಲ್ಲಾ ವಾರ್ಡ್ಗಳಿಗೆ ಒಟ್ಟಾಗಿ ತಾಂತ್ರಿಕ ಸಾಮರ್ಥ್ಯ ಮತ್ತು ಹಣಕಾಸು ಸಾಮರ್ಥ್ಯದ ಸಮರ್ಥನೆಗಾಗಿ ದಸ್ತಾವೇಜೀಯ ಪುರಾವೆಯನ್ನು ಬಿಡರ್ನು ಸಲ್ಲಿಸತಕ್ಕದ್ದು.ಆದಾಗ್ಯೂ, ಯಾರೇ ಬಿಡ್ಡರ್ನಿಗೆ ಗರಿಷ್ಠ 5 (ಐದು) ವಾರ್ಡ್ಗಳನ್ನು ಮಾತ್ರವೇ ನೀಡಲಾಗುವುದು.ಹಣಕಾಸು ಬಿಡ್ಗಳನ್ನು ವಾರ್ಡ್ ಸಂಖ್ಯೆಗಳ ಸಂಖ್ಯಾನುಕ್ರಮದಲ್ಲಿ ತೆರೆಯಲಾಗುವುದು.ಆದಾಗ್ಯೂ, ಬಿಡರ್ನು 1 (ಒಂದು) ಕ್ಕಿಂತ ಹೆಚ್ಚು ಪ್ಯಾಕೇಜ್ಗಳಿಗೆ ಸಂಬಂಧಿಸಿದಂತೆ ಚ ಆದ್ಯತೆಯ ಬಿಡ್ಡರ್ ಆಗಿದ್ದಲ್ಲಿ, ಮೊದಲನೇ ಪ್ಯಾಕೇಜ್‌ಅನ್ನು ನೀಡಿದ ನ ಂ ತರ ನೀಡಲಾಗುವ ಪ್ರತಿಯೊಂದು ಪ್ಯಾಕೇಜ್‌ಅನ್ನು ತೆಗೆದುಕೊಳ್ಳಲು ತಾಂತ್ರಿಕ ಮತ್ತು ಹಣಕಾಸು ಬಿಡ್ ಸಾಮರ್ಥ್ಯವನ್ನು ಬಿಲ್ಡರ್ನು ಪ್ರತ್ಯೇಕವಾಗಿ ಸಾಬೀತುಪಡಿಸತಕ್ಕದ್ದು.ಬಿಡರ್ನು ಯಾವುದೇ ಒಂದು ಪ್ಯಾಕೇಜ್ನಲ್ಲಿ ಆಯ್ಕೆಯಾದ ಬಿಲ್ಡರ್ ಆದಲ್ಲಿ, ಅದರ ತಾಂತ್ರಿಕ ಮತ್ತು ಹಣಕಾಸು ಬಿಡ್ ಸಾಮರ್ಥ್ಯವು ಮುಗಿದು ಹೋಗಿರದೆ ಇದ್ದರೆ ಮತ್ತು ಉಳಿದ ತಾಂತ್ರಿಕ ಮತ್ತು ಹಣಕಾಸು ಬಿಡ್ ಸಾಮರ್ಥ್ಯವನ್ನು ಯಾವ ಪ್ಯಾಕೇಜ್ನ ಮಾಲ್ಯಮಾಪನ ಮಾಡಲಾಗುವುದೋ ಅದಕ್ಕೆ ಸಮರ್ಪಕವಾಗಿದ್ದರೆ ಮಾತ್ರವೇ ತರುವಾಯದ ಪ್ಯಾಕೇಜ್‌ಅನ್ನು/ಗಳನ್ನು ವಹಿಸಿಕೊಡತಕ್ಕದ್ದು.

3.4.3 ಮೇಲೆ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡವನ್ನು ಈಡೇರಿಸುವ ಬಿಡ್ಡರ್ಗಳ ಲಭ್ಯ ಬಿಡ್ ಸಾಮರ್ಥ್ಯವು ಒಟ್ಟು ಟೆಂಡರ್ ಮೌಲ್ಯಕ್ಕಿಂತ ಹೆಚ್ಚಾಗಿದ್ದರೆ ಅವರು ಅರ್ಹರಾಗುವರು.ಲಭ್ಯ ಬಿಡ್ ಸಾಮರ್ಥ್ಯವನ್ನು ಈ ಕೆಳಗಿನಂತೆ ಲೆಕ್ಕಹಾಕಲಾಗುವುದು:

ಮೌಲ್ಯನಿರ್ಧರಿತ ಲಭ್ಯ ಬಿಡ್ ಸಾಮರ್ಥ್ಯ = ( ಎ* ಎನ್* 1.5-ಬಿ)

ಇದರಲ್ಲಿ,

ಎ = ಪೂರ್ಣಗೊಂಡ ಹಾಗೂ ಪ್ರಗತಿಯಲ್ಲಿರುವ ಯೋಜನೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಕಳೆದ 3 (ಮೂರು) ವರ್ಷಗಳ ಅವಧಿಯಲ್ಲಿ ಯಾವುದೇ ಒಂದು ವರ್ಷದಲ್ಲಿ ಮುಕ್ತಾಯವಾದ ಯೋಜನೆಗಳ ಗರಿಷ್ಠ ಮೌಲ್ಯ.

ಎನ್ = ಬಿಡ್ಗಳನ್ನು ಆಹ್ವಾನಿಸಲಾಗಿರುವ ಕಾಮಗಾರಿಗಳನ್ನು ಪೂರ್ಣಗೊಳಿಸುವುದಕ್ಕಾಗಿ ನಿಗದಿಪಡಿಸಿದ ವರ್ಷಗಳ ಸಂಖ್ಯೆ.

ಬಿ = ಅಸ್ತಿತ್ವದಲ್ಲಿರುವ ಯೋಜನೆಗಳನ್ನು ಪೂರ್ಣಗೊಳಿಸಬೇಕಿರುವ ಹಣಕಾಸು ವರ್ಷ 2017-18ರಲ್ಲಿನ ಮೌಲ್ಯ ಮತ್ತು ಚಾಲ್ತಿಯಲ್ಲಿರುವ ಯೋಜನೆಗಳನ್ನು ಮುಂದಿನ 12 ತಿಂಗಳುಗಳ ಅವಧಿಯಲ್ಲಿ ಪೂರ್ಣಗೊಳಿಸಬೇಕು.

3.7.5 ಒಂದಕ್ಕಿಂತ ಹೆಚ್ಚು ಪ್ಯಾಕೇಜ್ಗಳನ್ನು ಪರಿಗಣಿಸಬೇಕಿಂದಿದ್ದರೆ, 3620 ವಾರ್ಡ್ಗಳಿಗಾಗಿ ಹಣಕಾಸು ಬಿಡ್ಗಳನ್ನು ಸಲ್ಲಿಸಲಾಗಿರುವುದೋ ಅವುಗಳ ಸಂಬಂಧದಲ್ಲಿ 3.4.2 ನೇ ಖಂಡದಲ್ಲಿ ನಿರೂಪಿಸಿದಂತೆ ತಾಂತ್ರಿಕ ಸಾಮರ್ಥ್ಯ ಮತ್ತು ಹಣಕಾಸು ಸಾಮರ್ಥ್ಯವನ್ನು ಬಿಡರ್ನು ಸಾಬೀತುಪಡಿಸಬೇಕು.ಹಣಕಾಸು ಬಿಡ್ಗಳನ್ನು ತೆರೆಯುವ ಸರಣಿ ಕ್ರಮವನ್ನು ಸಂಖ್ಯಾನುಕ್ರಮಣಿಕೆಯಲ್ಲಿ ನಡೆಸಕತಕ್ಕದ್ದು.ಮೊದಲನೆಯದಾಗಿ, ಪ್ಯಾಕೇಜ್ ಸಂಬಂಧದಲ್ಲಿನ ಎಲ್ಲ ಅರ್ಹ ಬಿಡ್ಡರ್ಗಳ ಹಣಕಾಸು ಬಿಡ್ಗಳನ್ನು ತೆರೆಯತಕ್ಕದ್ದು.ಮೊದಲನೇ ಪ್ಯಾಕೇಜ್ಗಾಗಿ

ಬಿಡರ್ನು ಅರ್ಹನಾಗುವನು.ಎರಡನೇ ಪ್ಯಾಕೇಜ್ಗಾಗಿ ಆದ್ಯತೆಯ ಬಿಡರ್ನ ಹಣಕಾಸು ಬಿಡ್ನ್ನು ತೆರೆಯುವ ಮೊದಲು, ಆದ್ಯತೆಯ ಬಿಡರ್ನ ಉಳಿದ ತಾಂತ್ರಿಕ ಮತ್ತು ಹಣಕಾಸು ಸಾಮರ್ಥ್ಯವನ್ನು ಅಂದಾಜು ಮಾಡಬೇಕಾಗುತ್ತದೆ.ಉಳಿದ ತಾಂತ್ರಿಕ ಮತ್ತು ಹಣಕಾಸು ಬಿಡ್ಡಿಂಗ್ ಸಾಮರ್ಥ್ಯವನ್ನು, ಬಿಲ್ಡರ್ನ ಒಟ್ಟು ಹಣಕಾಸು ಸಾಮರ್ಥ್ಯದಿಂದ, ನೀಡಲಾದ ಪ್ಯಾಕೇಜ್ ಸಂಬಂಧದಲ್ಲಿ, 3.4.1 ( ಎ) ಮತ್ತು 3.4.1 (ಬಿ) ಖಂಡಗಳಲ್ಲಿ ಉಲ್ಲೇಖಿಸಿದಂತೆ ಕನಿಷ್ಠ ತಾಂತ್ರಿಕ ಸಾಮರ್ಥ್ಯ ಮತ್ತು ಹಣಕಾಸು ಸಾಮರ್ಥ್ಯವನ್ನು ಕಳೆಯುವ ಮೂಲಕ ಲೆಕ್ಕಹಾಕತಕ್ಕದ್ದು.ಅದರ ಉಳಿದ ತಾಂತ್ರಿಕ ಮತ್ತು ಹಣಕಾಸು ಬಿಡ್ ಮಾಡುವ ಸಾಮರ್ಥ್ಯವು ಆ ಆ ಎರಡನೇ ಪ್ಯಾಕೇಜ್ಗೆ ಸಮರ್ಪಕವಾಗಿದ್ದರೆ, ಆಗ ಅದರ ಹಣಕಾಸು ಬಿಡ್‌ಅನ್ನು ಮೌಲ್ಯಮಾಪನಕ್ಕಾಗಿ ಪರಿಗಣಿಸಲಾಗುವುದು.ಆದ್ಯತೆಯ ಬಿಡರ್ನ ತಾಂತ್ರಿಕ ಮತ್ತು ಹಣಕಾಸು ಬಿಡ್ ಮಾಡುವ ಸಾಮರ್ಥ್ಯವು ಕೊನೆಗೊಂಡಿದ್ದ ಹಾಗೂ ಉಳಿದ ತಾಂತ್ರಿಕ ಮತ್ತು ಹಣಕಾಸು ಬಿಡ್ ಮಾಡುವ ಸಾಮರ್ಥ್ಯವು, ಪರಿಗಣನೆಯಲ್ಲಿರುವ ಪ್ಯಾಕೇಜ್ ಸಂಬಂಧದಲ್ಲಿ ಸಮರ್ಪಕವಾಗಿರದ ಸಂದರ್ಭದಲ್ಲಿ, ಆಗ ಅಂಥ ಆದ್ಯತೆಯ ಬಿಡರ್ನ ಹಣಕಾಸು ಬಿಡ್‌ಅನ್ನು ಅದಕ್ಕಾಗಿ ತೆರೆಯತಕ್ಕದ್ದಲ್ಲ. ಆ ಪ್ಯಾಕೇಜ್ ಸಂಬಂಧದಲ್ಲಿನ ಅಂಥ ಆದ್ಯತೆಯ ಬಿಡ್ಡರ್ನು, ಉಳಿದ ಅರ್ಹ ಬಿಡ್ಡರ್ಗಳ ಪೈಕಿ ಅತ್ಯಂತ ಕಡಿಮೆ ಸೇವಾ ಶುಲ್ಕವನ್ನು ಉಲ್ಲೇಖಿಸಿದ ಬಿಡ್ಡರ್ ಆಗುವನು.

8. 3.4.1 ನೇ ಖಂಡದ ಅವಲೋಕನದಿಂದ, ಅಂಕ ವ್ಯವಸ್ಥೆಯನ್ನಾಧರಿಸಿ ವಿಧಿಸಲಾಗಿರುವ ಮಾನದಂಡವನ್ನು ಬಿಡರ್ನು ಈಡೇರಿಸಬೇಕಾದ ಅಗತ್ಯವಿದೆ ಎಂಬುದು ಸಾಬೀತಾಗುತ್ತದೆ ಮತ್ತು ಪ್ರಸ್ತಾವನೆ ಸಂಬಂಧದಲ್ಲಿನ ಮನವಿಯು, ಬಿಡ್ಡರ್ನು ಒಂದು ಅಥವಾ ಹೆಚ್ಚು ಅರ್ಹತಾ ಮಾನದಂಡಗಳನ್ನು ಈಡೇರಿಸಲು ವಿಫಲನಾದರೆ, ಆತನ ಬಿಡ್‌ಅನ್ನು ಅನುಮೋದನಾತ್ಮಕಲ್ಲದ ಬಿಡ್ ಎಂಬುದಾಗಿ ಪರಿಗಣಿಸಲಾಗುವುದು ಎಂದು ಸ್ಪಷ್ಟವಾಗಿ ಉಪಬಂಧಿಸುತ್ತದೆ.ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಅರ್ಹತಾ ಷರತ್ತುಗಳಿಗೆ ಸಂಬಂಧಿಸಿದ ಅಗತ್ಯವನ್ನು ಈಡೇರಿಸದ ಪರಿಣಾಮಗಳನ್ನು ಪ್ರಸ್ತಾವನೆ ದಸ್ತಾವೇಜಿನ ಸಂಬಂಧದಲ್ಲಿನ ಮನವಿಯಲ್ಲಿಯೇ ಉಪಬ ಂ ಧಿಸಲಾಗಿದೆ.ಆದುದರಿಂದ, ಅದನ್ನು ಕಡ್ಡಾಯವೆ ಂ ದೇ ಪರಿಗಣಿಸಬೇಕಾಗುತ್ತದೆ.ಹಾಗೆಯೇ, ಹಣಕಾಸು ಸಾಮರ್ಥ್ಯವನ್ನು ಕುರಿತು ವ್ಯವಹರಿಸುವ 3.4.1 (ಬಿ) ಖಂಡವು, ಅದರಲ್ಲಿ ಉಲ್ಲೇಖಿಸಿದ ಒಂದು ಅಥವಾ ಹೆಚ್ಚು ಅರ್ಹತಾ ಮಾನದಂಡಗಳನ್ನು ಬಿಡರ್ನು ಈಡೇರಿಸದಿದ್ದರೆ, ಆತನ ಬಿಡ್‌ಅನ್ನು ಅನುಮೋದನಾತ್ಮಕಲ್ಲದ ಬಿಡ್ ಎಂದು ಪರಿಗಣಿಸಲಾಗುವುದು ಎಂದು ಮತ್ತು ಇದಲ್ಲದೆ, ಆ ಬಿಡ್ ಸ ಂ ಬ ಂ ಧವಾಗಿ ಮೌಲ್ಯಮಾಪನ ಕೈಗೊಳ್ಳಲಾಗುವುದಿಲ್ಲವೆಂದು ಸಹ ಉಪಬಂಧಿಸುತ್ತದೆ.ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತಾ ಮಾನದಂಡವನ್ನು ಈಡೇರಿಸುವ ಬಿಡರ್ನು, ಲಭ್ಯ ಬಿಡ್ ಸಾಮರ್ಥ್ಯವು ಒಟ್ಟು ಟೆಂಡರ್ ಮೌಲ್ಯಕ್ಕಿಂತ ಹೆಚ್ಚಾಗಿದ್ದರೆ ಮಾತ್ರ ಅರ್ಹನಾಗುವನು ಎಂದು 3.4.3 ನೇ ಖಂಡವು ಉಪಬಂಧಿಸುತ್ತದೆಯಾದ್ದರಿಂದ, ಲಭ್ಯ ಬಿಡ್ ಸಾಮರ್ಥ್ಯವನ್ನು ಲಭ್ಯವಿರುವ ಸೂತ್ರದ ಆಧಾರದ ಮೇಲೆ ಲೆಕ್ಕ ಹಾಕಬೇಕಾಗುತ್ತದೆ.ಆದಾಗ್ಯೂ, ಒಂದಕ್ಕಿಂತ ಹೆಚ್ಚು ಪ್ಯಾಕೇಜ್ಗಳ ಸಂಬಂಧದಲ್ಲಿ ತನ್ನ ಬಿಡ್ ಸಲ್ಲಿಸಿರುವ ಚ ಬಿಡ್ಡರ್ಗೆ ಸಂಬಂಧಪಟ್ಟ ಹಣಕಾಸು ಬಿಡ್ ಸಾಮರ್ಥ್ಯವನ್ನು ಹೇಗೆ ಲೆಕ್ಕಹಾಕಬೇಕೆಂಬುದನ್ನು 3.7.5 ನೇ ಖಂಡವು ವ್ಯಕ್ತ ಪದಗಳಲ್ಲಿ ಕಡ್ಡಾಯಪಡಿಸಿದೆ.

9. ಪ್ರಸ್ತುತ ಮೊಕದ್ದಮೆಯಲ್ಲಿ, ಒಪ್ಪಿಕೊಂಡಿರುವಂತೆ, 6 ನೇ ಪ್ರತ್ಯರ್ಜಿದಾರನು ತನ್ನ ಬಿಡ್‌ಅನ್ನು ಸಲ್ಲಿಸಿದ್ದು, ಆತನ ಬಿಡ್ ಅತ್ಯಂತ ಕಡಿಮೆ ಆದ್ಯತೆಯ ಬಿಡ್ಡರ್ನದಾಗಿದೆ ಎಂದು ಕಂಡುಬಂದಿದೆ.ಒಪ್ಪಿಕೊಂಡಿರುವಂತೆ, 6 ನೇ ಪ್ರತ್ಯರ್ಜಿದಾರನ ಹಣಕಾಸು ಬಿಡ್ ಮಾಡುವ ಸಾಮರ್ಥ್ಯವು 148.72 ಲಕ್ಷ ರೂಪಾಯಿಗಳಾಗಿದ್ದು, 9 ನೇ ವಾರ್ಡ್ನ ಸಂಬಂಧದಲ್ಲಿ, ಆತನು ಅತ್ಯಂತ ಕಡಿಮೆ ಬಿಡ್ಕರ್ನಾಗಿರುವನೆಂದು ಕಂಡುಬಂದಿತ್ತು ಮತ್ತು 3.4.1 (ಬಿ) ಖಂಡದಲ್ಲಿರುವ ಅಗತ್ಯತೆಯನ್ನು ಈಡೇರಿಸಿದ ನಂತರ, ಆತನ ಹಣಕಾಸು ಬಿಡ್ ಸಾಮರ್ಥ್ಯವು 148.72 ಲಕ್ಷ ರೂ.ಗಳಿಗೆ ಇಳಿಕೆಯಾಗಿದ್ದು, ಅದು 26 ನೇ ವಾರ್ಡ್ನ ಸಂಬಂಧದಲ್ಲಿನ ಕರಾರಿನ ಒಟ್ಟು ಮೌಲ್ಯ 280.34 ಲಕ್ಷ ರೂ.ಗಳಿಗೆ ಪರಾಪ್ತವಾಗಿರುವುದಿಲ್ಲವಾದ್ದರಿಂದ, 6 ನೇ ಪ್ರತ್ಯರ್ಜಿದಾರನು 560.68 ಲಕ್ಷ ರೂ.ಗಳ ಹಣಕಾಸು ಬಿಡ್ ಸಾಮರ್ಥ್ಯವನ್ನು ಹೊಂದಿರಬೇಕಿತ್ತು.

10. ಪ್ರತ್ಯರ್ಜಿದಾರ-ನಿಗಮದ ಪರ ಮಾನ್ಯ ನ್ಯಾಯವಾದಿಗಳು ಮಾಡಿದ ವಾದವನ್ನು ಒಪ್ಪಿಕೊಂಡಿದ್ದು, 3.4.1 (ಬಿ) ಖಂಡದಲ್ಲಿ ವಿಧಿಸಿರುವ ಹಣಕಾಸು ಸಾಮರ್ಥ್ಯದ ಅಗತ್ಯತೆಯನ್ನು ಅದು ಈಡೇರಿಸುವುದು ಎಂಬುದು ನಿರುಪಯುಕ್ತ ಮತ್ತು ಅನಾವಶ್ಯಕ.ಹಣಕಾಸು ಸಾಮರ್ಥ್ಯಕ್ಕಾಗಿ ಉಪಬಂಧ ಕಲ್ಪಿಸಿರುವ ಉದ್ದೇಶ ಕಾಮಗಾರಿಯ ಸುಗಮ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದಾಗಿದೆ.ಬಿಡರ್ನು ಸಾಕಷ್ಟು ವಾರ್ಷಿಕ

ವಹಿವಾಟನ್ನು ಹೊಂದಿಲ್ಲದೆ ಇರಬಹುದಾದರೂ, ಆತನನ್ನು ಕನಿಷ್ಠ ಬಿಡ್ದಾರ್ ಎಂದು ಘೋಷಿಸಬಹುದಾಗಿದೆ ಎಂಬುದು, ಹಣಕಾಸು ಸಾಮರ್ಥ್ಯಕ್ಕೆ ಸಂಬಂಧಿಸಿದ ಷರತ್ತನ್ನು ಒಳಗೊಂಡ ಉದ್ದೇಶಕ್ಕೆ ವಿರುದ್ಧವಾಗುವುದರಿಂದ ಅದನ್ನು ಒಪ್ಪಲಾಗುವುದಿಲ್ಲ.ಏಕೆಂದರೆ ಅದರ ಉದ್ದೇಶವೇ ಗುತ್ತಿಗೆದಾರನಿಗೆ ನೀಡಿದ ಗುತ್ತಿಗೆ ಕಾಮಗಾರಿಯನ್ನು ಯಾವುದೇ ಅಡಚಣೆ ಇಲ್ಲದೆ ಸುಗಮವಾದ ರೀತಿಯಲ್ಲಿ ನಿರ್ವಹಿಸುವ ಕಾರ್ಯವನ್ನು ಪೂರ್ಣಗೊಳಿಸಲು ಆತನು ಸಂಪನ್ಮೂಲಗಳನ್ನು ಹೊಂದಿರಬೇಕೆಂದು ಸುನಿಶ್ಚಿತಗೊಳಿಸುವುದಾಗಿದೆ ಎಂದು ನಿಗಮದ ಪರವಾಗಿ ವಾದಿಸಲಾಗಿದೆ. ಇದಲ್ಲದೆ, ಇಂಥ ಅರ್ಥವಿವರಣೆಯು, ಪ್ರಸ್ತಾವನಾ ಮನವಿಯ.

3.7.5 ನೇ ಖಂಡದಲ್ಲಿರುವ ಷರತ್ತಿನ ಸ್ಪಷ್ಟ ಉಲ್ಲಂಘನೆಯಾಗಿದ್ದು, ಅದನ್ನು ಒಪ್ಪಲಾಗುವುದಿಲ್ಲ.

11. ಬಿಲ್ದಾರ್‌ಗಳ ಅರ್ಹತೆಗೆ ಸಂಬಂಧಿಸಿದ ನಿಬಂಧನೆಗಳು ಮತ್ತು ಷರತ್ತುಗಳು --ಕಡ್ಡಾಯವಾದವುಗಳಾಗಿವೆ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಬಂಧನಕಾರಿಯಾಗಿವೆ.ಅದನ್ನು ಮೀರಲು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಅನುಮತಿಸಲಾಗುವುದಿಲ್ಲ.ರಾಜ್ಯದ ಮಾಧ್ಯಮವಾಗಿರುವ ಪ್ರತ್ಯರ್ಜಿದಾರ-ನಿಗಮವು, ಕರಾರನ್ನು ಮೌಲ್ಯಮಾಪನ ಮಾಡುವಾಗ ನ್ಯಾಯಯುತವಾಗಿ, ಸೂಕ್ತವಾಗಿ ಮತ್ತು ತಾರ್ಕಿಕ ರೀತಿಯಲ್ಲಿ ಕಾರನಿರ್ವಹಿಸಬೇಕೆಂಬುದು ಸಾಮಾನ್ಯ ಕಾನೂನಾಗಿದೆ.ನ್ಯಾಯಿಕ ಪರಿಶೀಲನೆಯ ಅಧಿಕಾರಗಳ ಚಲಾವಣೆಯಲ್ಲಿ, ಸಾರ್ವಜನಿಕ ಹಿತಾಸಕ್ತಿಯ ಅಂಶ ಇಲ್ಲದಿರುವಲ್ಲಿ ಪ್ರತಿಸ್ಪರ್ಧಿ ಟೆಂಡರ್ದಾರರ ನಡುವಿನ ವಿವಾದದಲ್ಲಿ ಹಸ್ತಕ್ಷೇಪ ಮಾಡಬಾರದು ಎಂಬ ಸಂಗತಿ ಕುರಿತು ಈ ನ್ಯಾಯಾಲಯಕ್ಕೆ ಅರಿವಿದೆ.ಆದಾಗ್ಯೂ, ಪ್ರಸ್ತುತ ಮೊಕದ್ದಮೆಯಲ್ಲಿ, 6 ನೇ ಪ್ರತ್ಯರ್ಜಿದಾರರಿಗೆ ಗುತ್ತಿಗೆ ನೀಡಲಾಗಿದ್ದು, ಅವರ ಹಣಕಾಸು ಅಸಾಮರ್ಥ್ಯದ ಕಾರಣದಿಂದ ಅವರಿಗೆ ಹಂಚಿಕೆ ಮಾಡಿದ ಕಾಮಗಾರಿಯನ್ನು ಪೂರ್ಣಗೊಳಿಸಲು ಅವರಿಗೆ ಸಾಧ್ಯವಾಗದಿದ್ದಲ್ಲಿ, ಸಾರ್ವಜನಿಕ ಹಿತಾಸಕ್ತಿಯು ಶಿಥಿಲವಾಗುವುದರಿಂದ, ಸಾರ್ವಜನಿಕ ಹಿತಾಸಕ್ತಿಯ ಅಂಶವು, ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲು ಈ ನ್ಯಾಯಾಲಯವನ್ನು ಅಗತ್ಯಪಡಿಸುತ್ತದೆ.ಆದುದರಿಂದ, ಈ ಕಾರಣಕ್ಕಾಗಿ, ಮೊಕದ್ದಮೆಯ ವಾಸ್ತವಿಕ ಸನ್ನಿವೇಶದ ಹಿನ್ನೆಲೆಯಲ್ಲಿ, ನ್ಯಾಯಿಕ ಪರಿಶೀಲನೆಯ ಅಧಿಕಾರಗಳ ಚಲಾವಣೆಯಲ್ಲಿ ಹಸ್ತಕ್ಷೇಪದ ಅಗತ್ಯವಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಸ್ತಾವನಾ ಮನವಿಯ 3.7.5 ನೇ ಖಂಡದಲ್ಲಿರುವ ವ್ಯಕ್ತ ಷರತ್ತಿನ ಸ್ಪಷ್ಟ ಉಲ್ಲಂಘನೆಯ ಹಿನ್ನೆಲೆಯಲ್ಲಿ, 6 ನೇ ಪ್ರತ್ಯರ್ಜಿದಾರರು ಅಗತ್ಯ ಹಣಕಾಸು ಸಾಮರ್ಥ್ಯವನ್ನು ಹೊಂದಿರದೇ ಇದ್ದರೂ, ಅವರನ್ನು ಕನಿಷ್ಠ ಬಿಡ್ದಾರ್ ಎಂದು ಪ್ರತ್ಯರ್ಜಿದಾರ ನಿಗಮವು ಘೋಷಿಸಿದೆ.ಆದುದರಿಂದ, 6 ನೇ ಪ್ರತ್ಯರ್ಜಿದಾರನನ್ನು ವಾರ್ಡ್ಸಂಖ್ಯೆ: 26 ರ ಸಂಬಂಧದಲ್ಲಿ ಕನಿಷ್ಠ ಬಿಲ್ದಾರ್ನೆಂದು ಘೋಷಿಸುವಲ್ಲಿ ಪ್ರತ್ಯರ್ಜಿದಾರ-ನಿಗಮದ ಪ್ರಶ್ನಿತ ನಿರ್ಣಯವನ್ನು ಈ ಮೂಲಕ ರದ್ದುಗೊಳಿಸಲಾಗಿದೆ.ಅರ್ಜಿದಾರರ ಬಿಡ್ಡಳನ್ನು ಹಾಗೂ ತಾಂತ್ರಿಕವಾಗಿ ಅನುಮೋದನಾತ್ಮಕವಾಗಿದೆ ಎಂದು ಕಂಡುಬಂದಿರುವ 6 ನೇ ಪ್ರತ್ಯರ್ಜಿದಾರರ ಬಿಡ್ಡಳನ್ನು ಮೌಲ್ಯಮಾಪನ ಮಾಡಲು ಮತ್ತು ಕಾರ್ಯಸಾಧ್ಯವಿದ್ದಷ್ಟು ತ್ವರಿತವಾಗಿ ಪ್ರಸ್ತಾವನಾ ಮನವಿ ದಸ್ತಾವೇಜಿನ 3.7.5 ನೇ ಖಂಡದಲ್ಲಿ ಗೊತ್ತುಪಡಿಸಿರುವ ಷರತ್ತುಗಳ ಹಿನ್ನೆಲೆಯಲ್ಲಿ ಅವರ ಟೆಂಡರ್ ಬಿಡ್ಡಳನ್ನು ಮೌಲ್ಯಮಾಪನ ಮಾಡಲು ಪ್ರತ್ಯರ್ಜಿದಾರ-ನಿಗಮಕ್ಕೆ ನಿರ್ದೇಶಿಸಲಾಗಿದೆ.

ತದನುಸಾರವಾಗಿ, ಅರ್ಜಿಯನ್ನು ವಿಲೇ ಮಾಡಲಾಗಿದೆ.